ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಆ) ಹಲವು ಖಾಸಗೀ ಶಿಕ್ಷಣ ಸಂಸ್ಥೆಗಳು ಕಡು ಆರ್ಥಿಕ ತೊಂದರೆಯಿಂದ ಬಳಲುತ್ತಿದ್ದು ಆವಶ್ಯಕ ಸೌಲಭ್ಯಗಳನ್ನು ಒದಗಿಸದೇ ತಮ್ಮ ಶಾಲೆಗಳನ್ನು ಸರ್ಕಾರಕ್ಕೆ ವಹಿಸಿಕೊಡಲು ಮನವಿ ಸಲ್ಲಿಸಿದ್ದಾರೆ. ಈ ಮನವಿಯನ್ನು ಪರೀಕ್ಷಿಸಲಾಗುತ್ತಿದೆ.

ಆ) ಪ್ರಶ್ನೆ (ಆ)ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಹಾಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ

೧೦೮೮ (೩೦೧) ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

೧. ಶಹಾಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಒಳಪಟ್ಟ ಹಳ್ಳಿಗಳೆಷ್ಟು?

೨. ಆ ಪೈಕಿ ಎಷ್ಟು ಹಳ್ಳಿಗಳಲ್ಲಿ ಈ ಯೋಜನೆ ಫಲಪ್ರಧವಾಗಿದೆ?

೩. ಎಷ್ಟು ಗ್ರಾಮಗಳಲ್ಲಿ ಸದರಿ ಕಾಮಗಾರಿಯು ಪ್ರಾರಂಭವಾಗಿದೆ?

೪. ಈ ಮೇಲ್ಕಂಡ ಯೋಜನೆಯು ವ್ಯಾಪ್ತಿಗೊಳಪಡದ ಗ್ರಾಮಗಳನ್ನು ಯಾವಾಗ ಸದರಿ ಯೋಜನೆಗೆ ಒಳಪಡಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂವಕ್ಫ್ ಸಚಿವರು).—

೧. ಶಹಾಪುರ ತಾಲ್ಲೂಕಿನಲ್ಲಿ ೨೧ ಹಳ್ಳಿಗಳನ್ನು ರ್ಟಾಪ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಒಳಪಡಿಸಲಾಗಿದೆ.

೨. ಆ ಪೈಕಿ ೧೯ ಹಳ್ಳಿಗಳಲ್ಲಿ ಈ ಯೋಜನೆ ಫಲಪ್ರಧವಾಗಿ ಕಾರ್ಯ ನಿರ್ವಹಿಸುತ್ತಿದೆ.

೩. ಎಲ್ಲಾ ೨೧ ಹಳ್ಳಿಗಳಲ್ಲಿಯೂ ಕಾಮಗಾರಿಯು ಪ್ರಾರಂಭವಾಗಿದ್ದು, ೧೪ ಯೋಜನೆಗಳನ್ನು ಸಂಪೂರ್ಣಗೊಳಿಸಲಾಗಿದೆ. ೫ ಯೋಜನೆಗಳಿಗೆ ನೇರವಾಗಿ ವಿತರಣಾ ಕೊಳವೆಗಳಿಗೆ ನೀರು ಸರಬರಾಜು ಮಾಡಲಾಗಿದೆ. ಮತ್ತು ಉಳಿದ ೨ ಯೋಜನೆಗಳ ಕಾಮಗಾರಿಯು ಪ್ರಗತಿಯಲ್ಲಿದೆ.

೪. ಈಗ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ನಿಯಮಗಳ ಪ್ರಕಾರ ೨೦೦೦ಕ್ಕಿಂತ ಜನಸಂಖ್ಯೆ ಹೆಚ್ಚಿರುವ ಗ್ರಾಮಗಳು ನೀರು ಸರಬರಾಜು ಯೋಜನೆಯನ್ನು ಪಡೆಯಲು ಅರ್ಹವಾಗಿದೆ. ಅಂದರೆ ಒಟ್ಟು ೨೨ ಗ್ರಾಮಗಳು ಶಹಾಪುರ ತಾಲ್ಲೂಕಿನಲ್ಲಿ ನೀರು ಸರಬರಾಜು ಯೋಜನೆಯನ್ನು ಪಡೆಯಲು ಅರ್ಹವಾಗಿವೆ. ಇಲ್ಲಿಯವರೆಗೆ ೨೦೦೦ಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ೧೦ ಗ್ರಾಮಗಳಿಗೆ ಯೋಜನೆಗಳನ್ನು ಅನುಮೋದಿಸಲಾಗಿದೆ. ಇನ್ನುಳಿದ ೨೦೦೦ಕ್ಕಿಂತ ಜನಸಂಖ್ಯೆ ಹೆಚ್ಚಿರುವ ೧೨ ಗ್ರಾಮಗಳಿಗೆ ಮೇಲ್ಕಂಡ ಯೋಜನೆಯನ್ನು ಹಂತಹಂತವಾಗಿ ಜಿಲ್ಲಾ ಅಭಿವೃದ್ಧಿ ಮಂಡಲಿ ಮತ್ತು ಸರ್ಕಾರದ ಅನುಮೋದನೆಯ ನಂತರ ಆಯ ವ್ಯಯ ಪಟ್ಟಿಯಲ್ಲಿ ಸೇರಿಸಿ ಹಣದ ವ್ಯವಸ್ಥೆಯಾದ ನಂತರ ಕೈಗೊಳ್ಳಲಾಗುವುದು.

ಎಸ್.ಜಿ. ಪಾಲಿಟೆಕ್ನಿಕ್ ಬೆಂಗಳೂರು

೧೦೯ (೧೦೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—